ತರಳಬಾಳು ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಸಿರಿಗೆರೆ

# ತರಳಬಾಳು 'ಕೃಷಿ ಸಿಂಚನ'

ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ

ದೂರವಾಣಿ : 08192-263462
ಫ್ಯಾಕ್ಸ್: 08192 - 260969

ತ್ರೈಮಾಸಿಕ ಪತ್ರಿಕೆ
(Quarterly News Letter)
ಏಪ್ರಿಲ್ - ಜೂನ್ 2013

ಮಿಂಚಂಚೆ: dvgtkvk@yahoo.com
Website: www.taralabalukvk.com
ಸಂಪುಟ-6 ಸಂಚಿಕೆ-3

## ಸಿಂಚನಕ್ಕೆ ಮುನ್ನ .......

ಆತ್ಮೀಯ ಬಂಧುಗಳೇ,

ಎಂದಿನ ಉತ್ಸಾಹದಲ್ಲಿ ಇಂದು ಬರೆಯಲಾಗುತ್ತಿಲ್ಲ. ಇದಕ್ಕೆ ಕಾರಣ, ನಮ್ಮೆಲ್ಲರ ಅಚ್ಚು ಮೆಚ್ಚಿನ ಹಿರಿಯರಾದ **ಡಾ. ಮನು ಎನ್. ಕುಲಕರ್ಣಿಯವರು** ದಿನಾಂಕ 12-07-2013 ರಂದು ಹಠಾತ್ ದೈವಾಧೀನರಾದರು. ಆರೋಗ್ಯದ ಬುಗ್ಗೆಯಾಗಿ, ಚೈತನ್ಯದ ಸೆಲೆಯಾಗಿ, ತುಂಬು ಜೀವನೋತ್ಸಾಹವನ್ನು ಸದಾ ಬಿಂಬಿಸುತ್ತಿದ್ದ ಈ ಹಿರಿಯ ಸ್ನೇಹಿತರು, ನಮ್ಮ ಮಾತೃಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರಾಗಿ, ನಮಗೆಲ್ಲಾ ಮಾರ್ಗದರ್ಶಕರಾಗಿದ್ದರು. ಶ್ರೀಯುತರು ಸಂಸ್ಥೆಯ ಬಹುಕಾಲದ ಒಡನಾಟ ಹೊಂದಿದ್ದು, ಅನೇಕ ಗುರುತರ ಯೋಜನೆಗಳಲ್ಲಿ ಪ್ರಮುಖ ಪಾತ್ರವಹಿಸಿ ಯಶಸ್ವಿ ಅನುಷ್ಠಾನಕ್ಕೆ ಕಾರಣಕರ್ತರಾಗಿದ್ದಂಥವರು. ನಮ್ಮ ಕೃಷಿ ವಿಜ್ಞಾನ ಕೇಂದ್ರದ ಬೆಳವಣಿಗೆಯಲ್ಲಿ ಪ್ರತಿ ಹೆಜ್ಜೆಹೆಜ್ಜೆಗೂ ಜೊತೆಯಾಗಿದ್ದವರು. ಕೃಷಿ ವಿಜ್ಞಾನ ಕೇಂದ್ರದಿಂದ 'ತರಳಬಾಳು ಜೇನು' ತಯಾರಿಸಬೇಕೆಂಬುದು ಅವರ ಸಿಹಿ ಹಂಬಲವಾಗಿತ್ತು. ಅದನ್ನು ಪೂರೈಸಲು ನಮಗೆ ಅವಕಾಶವನ್ನು ನೀಡದೆ ನಡೆದೇ ಬಿಟ್ಟರು. ರಷ್ಯಾಕ್ಕೆ ಪತ್ನಿಯೊಡಗೂಡಿ ಹೋಗಿ ಬರುವೆ ಎಂದು ಅವರು ನೀಡಿದ ಮಿಂಚಂಚೆಗೆ ಉತ್ತರಿಸುವ ಅವಕಾಶ ನನಗಿಲ್ಲ. ಅವರೊಂದಿಗೆ ಕಳೆದ ಕ್ಷಣಗಳು, ಅವರಾಡಿದ ಮಾತುಗಳೇ ನಮಗಿನ್ನು ಸ್ಫೂರ್ತಿ. "Even God is scared of honest people, so be honest my boy" ಎಂದು ಹುರಿದುಂಬಿಸುತ್ತಿದ್ದ ಅವರ ಮಾತುಗಳು ಮನದಾಳದಲ್ಲಿ ಅನುರಣಿಸುತ್ತಿವೆ. ಅವರ ಆತ್ಮಕ್ಕೆ ಚಿರಶಾಂತಿ ದೊರಕಿ, ಭಗವಂತನಲ್ಲಿ ಲೀನವಾಗಿರಲಿ ಎಂದು ಪ್ರಾರ್ಥಿಸಿ, ಹೃತ್ಪೂರ್ವಕ ಶ್ರದ್ಧಾಂಜಲಿ ಎಲ್ಲರ ಪರವಾಗಿ ಅರ್ಪಿಸುತ್ತಿದ್ದೇನೆ.

ವೇದಾಂತದ ಬಲದೊಂದಿಗೆ ಈ ನೋವನ್ನು ಸಾವರಿಸಿಕೊಂಡು ನಮ್ಮ ಕಳೆದ 3 ಮಾಸಗಳ ಪ್ರಮುಖ ಚಟುವಟಿಕೆಗಳನ್ನು ಹಂಚಿಕೊಳ್ಳುತ್ತಿದ್ದೇನೆ. ನಿಂತಿದ್ದ 'ಶನಿವಾರ ಸಾವಯವ ಸಂತೆ', ಪುನರ್ ಪ್ರಾರಂಭಿಸಲಾಗಿದೆ. ರೈತರು ಸಾವಯವ ಪದ್ಧತಿಯಲ್ಲಿ ಬೆಳೆದ ಅಕ್ಕಿ, ಬೇಳೆ, ಬೆಲ್ಲ, ದವಸ, ಸೊಪ್ಪು, ತರಕಾರಿ-ಹಣ್ಣುಗಳನ್ನು ತಾವೇ ಖುದ್ದಾಗಿ ಗ್ರಾಹಕರಿಗೆ ಪ್ರತಿ ಶನಿವಾರ ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಚಾವಡಿಯಲ್ಲಿ ಮಾರಾಟ ಮಾಡುವುದನ್ನು ನೋಡುವುದು ಕಣ್ಣಿಗೆ ಹಬ್ಬ, ಮನಕ್ಕೆ ಹಿತ. ದಾವಣಗೆರೆ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯತಿ ಅಧಿಕಾರಿಗಳು ಮತ್ತು ಸದಸ್ಯರಿಗೆ ಜೈವಿಕ ಇಂಧನದ ಬಗ್ಗೆ ಒಂದು ದಿನದ ಮಾಹಿತಿ ಮತ್ತು ಪ್ರಾತ್ಯಕ್ಷಿಕೆ ಕಾರ್ಯಕ್ರಮಗಳನ್ನು ಜೂನ್ ಕೊನೆವಾರದಲ್ಲಿ ಪ್ರಾರಂಭಿಸಿ, ಜುಲೈ ಕೊನೆ ದಿನದವರೆಗೆ ನಡೆಸುತ್ತಿರುವುದು ವಿಶೇಷವಾಗಿದೆ. ಇಡೀ ಜಿಲ್ಲೆಗೆ ಕೃಷಿ ವಿಜ್ಞಾನ ಕೇಂದ್ರದ ಪರಿಚಯ ಇದರ ಮೂಲಕ ಸುಲಭವಾಗಿ ಆಗಲಿದೆ.

ನಿಕ್ರಾ ಯೋಜನೆಯ ಪ್ರಗತಿ ವರದಿ ಮತ್ತು ಕ್ರಿಯಾಯೋಜನೆಗಳನ್ನು ಕೃಷಿ ವಿಜ್ಞಾನ ಕೇಂದ್ರ, ಬಾರಾಮತಿ, ಮಹಾರಾಷ್ಟ್ರದಲ್ಲಿ ಮಂಡಿಸಲಾಯ್ತು. ಅದೊಂದು ಅಧ್ಯಯನ ಭರಿತ ಪ್ರವಾಸವಾಗಿತ್ತು. ಪರಿಷತ್‌ನಿಂದ ಹಣಕಾಸು ಅನುಮೋದನೆ ಪಡೆದು, ಈ ವರ್ಷದ ಮುಂಚೂಣಿ ಪ್ರಾತ್ಯಕ್ಷಿಕೆಗಳು ಮತ್ತು ಕ್ಷೇತ್ರ ಪ್ರಯೋಗಗಳ ಅನುಷ್ಠಾನವನ್ನು ಆರಂಭಿಸಿದ್ದೇವೆ. ಹೊಸಹಳ್ಳಿಗಳು, ಹೊಸರೈತರು ಮತ್ತು ಹೊಸ ತಂತ್ರಜ್ಞಾನಗಳು. ಇದನ್ನು ಬರೆಯುವ ವೇಳೆಗೆ ಕೃಷಿ ವಿಜ್ಞಾನ ಕೇಂದ್ರದ ಪ್ರಗತಿವರದಿ (2012-13) ಯನ್ನು ಕೃಷಿ ವಿಜ್ಞಾನ ಕೇಂದ್ರ, ಪತ್ತನಂತಿಟ್ಟ, ಕೇರಳದಲ್ಲಿ ಮಂಡಿಸಿ ಬಂದಿದ್ದೇನೆ. ಇದೂ ಕೂಡ ವಿಶಿಷ್ಟ ಅಧ್ಯಯನ ಪ್ರವಾಸವಾಗಿತ್ತು. ನಮ್ಮ ಕೃಷಿ ವಿಜ್ಞಾನ ಕೇಂದ್ರವು ಕೃಷಿ ಜ್ಞಾನ ಸಂಪನ್ಮೂಲ ಕೇಂದ್ರವಾಗಿ ಜನ ಸಾಮಾನ್ಯರಲ್ಲಿ ಹೆಚ್ಚಾಗಿ ಪರಿಚಯವಾಗುತ್ತಿರುವುದು ದೃಶ್ಯವೇದ್ಯ. ಅನೇಕ ವಿದ್ಯಾರ್ಥಿಗಳು ದ್ವಿತೀಯ ಪಿ. ಯು. ಸಿ. ನಂತರದ ಕೋರ್ಸುಗಳಿಗೆ ಮಾಹಿತಿ ಪಡೆದಿರುತ್ತಾರೆ. ಜೊತೆಗೆ ದಾವಣಗೆರೆ ವಿಶ್ವವಿದ್ಯಾನಿಲಯದ 20 ಪದವಿ ಮತ್ತು ಸ್ನಾತಕೋತ್ತರ ಮಟ್ಟದ ವಿದ್ಯಾರ್ಥಿಗಳು ತಮ್ಮ ವ್ಯಾಸಂಗ ಪೂರಕ ಯೋಜನೆಗಳನ್ನು ನಮ್ಮ ಮಾರ್ಗದರ್ಶನದಲ್ಲಿ ಮಾಡಿರುತ್ತಾರೆ.

ನಾವೀಗ ಮಾನಸಿಕ, ಬೌದ್ಧಿಕ ಮತ್ತು ಶಾರೀರಿಕವಾಗಿ ಮತ್ತಷ್ಟು ಸದೃಢರಾಗಬೇಕಾದ ಅಗತ್ಯ ಹೆಚ್ಚಿದೆ. ಮೆಚ್ಚುಗೆ ಮಾತುಗಳಡಿಯಲ್ಲಿ ಜವಾಬ್ದಾರಿಯ ತೂಕವು ಅಡಗಿರುವುದು ನಿಚ್ಚಳ. ಇದನ್ನರಿತು ಮುನ್ನಡೆಯುವ ಜಾಣ್ಮೆ, ಕೌಶಲ್ಯ ಮತ್ತು ಚೈತನ್ಯವನ್ನು ದೇವರು ನಮಗೆ ನೀಡಲೆಂದು ಬೇಡುತ್ತಾ, ನಿಮಗೆಲ್ಲರಿಗೂ ಶುಭಹಾರೈಸುತ್ತೇನೆ.

ವಂದನೆಗಳು,
ಪ್ರೀತಿಯಿಂದ
ಡಾ. ದೇವರಾಜ ಟಿ.ಎನ್.

ಮಾತೃ ಸಂಸ್ಥೆ: ತರಳಬಾಳು ರೂರಲ್ ಡೆವಲಪ್‌ಮೆಂಟ್ ಫೌಂಡೇಶನ್, ಸಿರಿಗೆರೆ-577541, ಚಿತ್ರದುರ್ಗ ತಾ. ದೂರವಾಣಿ: 08194-268829, ಮಿಂಚಂಚೆ : trdf@taralabalu.org

## ಹಮ್ಮಿಕೊಂಡ ವಿಶೇಷ ಕಾರ್ಯಕ್ರಮಗಳು:



ಸಾವಯವ ಕೃಷಿಕರಿಗೆ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುವ ನಿಟ್ಟಿನಲ್ಲಿ ಕೇಂದ್ರದಲ್ಲಿ 'ಶನಿವಾರ ಸಾವಯವ ಸಂತೆ' ಕಾರ್ಯಕ್ರಮವನ್ನು ಪ್ರತಿ ಶನಿವಾರ ಹಮ್ಮಿಕೊಳ್ಳಲಾಗಿದೆ.



ದ್ವಿತಿಯ ಪಿ.ಯು.ಸಿ. ತೇರ್ಗಡೆಹೊಂದಿದ ವಿದ್ಯಾರ್ಥಿಗಳಿಗೆ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಯದಲ್ಲಿ ಪ್ರವೇಶಕ್ಕಾಗಿ ಕೇಂದ್ರದಲ್ಲಿ ವಿಶೇಷ ಮಾಹಿತಿ ಶಿಬಿರ ಹಮ್ಮಿಕೊಳ್ಳಲಾಗಿತ್ತು.

## ಹಮ್ಮಿಕೊಂಡ ಪ್ರಾಯೋಜಿತ ತರಬೇತಿ ಕಾರ್ಯಕ್ರಮಗಳು :



ದಿನಾಂಕ 9-5-2013 ರಂದು ತೋಟಗಾರಿಕೆ ಇಲಾಖೆ, ದಾವಣಗೆರೆ ಇವರು ಪ್ರಾಯೋಜಿತ 'ರಾಷ್ಟ್ರೀಯ ತೋಟಗಾರಿಕೆ ಮಿಷನ್' ಯೋಜನೆಯಡಿ ಇಲಾಖೆಯ ವಿಸ್ತರಣಾ ಅಧಿಕಾರಿಗಳಿಗೆ ತೋಟಗಾರಿಕೆ ಬೆಳೆಗಳಲ್ಲಿ ಆಧುನಿಕ ಬೇಸಾಯ ಕ್ರಮಗಳು' ಬಗ್ಗೆ ತರಬೇತಿ ಹಮ್ಮಿಕೊಳ್ಳಲಾಗಿತ್ತು.



ಜೈವಿಕ ಇಂಧನ ಇಲಾಖೆ, ಬೆಂಗಳೂರು ಇವರು ಪ್ರಾಯೋಜಿಸಿದ 'ದಾವಣಗೆರೆ ಜಿಲ್ಲೆಯ ಗ್ರಾಮ ಪಂಚಾಯತಿ ಅಧಿಕಾರಿಗಳು ಮತ್ತು ಸದಸ್ಯರುಗಳಿಗೆ ಜೈವಿಕ ಇಂಧನ ಮಾಹಿತಿ ಮತ್ತು ಪ್ರಾತ್ಯಕ್ಷಿಕೆ'ಯ 2 ಕಾರ್ಯಕ್ರಮಗಳನ್ನು 51 ಜನರಿಗೆ ಹಮ್ಮಿಕೊಳ್ಳಲಾಗಿತ್ತು.



ದಿನಾಂಕ 20-4-2013 ರಂದು ತೋಟಗಾರಿಕೆ ಇಲಾಖೆ, ಹರಿಹರ ಪ್ರಾಯೋಜಿತ 'ಪೌಷ್ಠಿಕ ಕೈತೋಟ'ದ ಬಗ್ಗೆ ತರಬೇತಿ ಕಾರ್ಯಕ್ರಮವನ್ನು ಮಹಿಳಾ ಸ್ವ-ಸಹಾಯ ಸಂಘಗಳ ಸದಸ್ಯರುಗಳಿಗೆ ಹಮ್ಮಿಕೊಳ್ಳಲಾಗಿತ್ತು.



ದಿನಾಂಕ 01-04-2013ರಂದು ಧನುಕಾ ಅಗ್ರಿ ಟೆಕ್ ಲಿಮಿಟೆಡ್ ಕರ್ನಾಟಕ ಕಂಪನಿಯ ಅಧಿಕಾರಿಗಳಿಗೆ 'ಭತ್ತದಲ್ಲಿ ಉತ್ಪಾದನಾ ತಾಂತ್ರಿಕತೆಗಳು ಮತ್ತು ಕೀಟನಾಶಕಗಳ ಉತ್ತಮ ಬಳಕೆ' ಬಗ್ಗೆ ತರಬೇತಿ ಹಮ್ಮಿಕೊಳ್ಳಲಾಗಿತ್ತು.

ದಿನಾಂಕ 3-4 ಜೂನ್ 2013 ರಲ್ಲಿ ಕೃಷಿ ವಿಜ್ಞಾನ ಕೇಂದ್ರ, ಬಾರಾಮತಿಯಲ್ಲಿ + 'ನಿಕ್ರಾ ಯೋಜನೆಯ ವಾರ್ಷಿಕ ವರದಿ ಮತ್ತು ಕ್ರಿಯಾ ಯೋಜನೆ 2013-14' ಕಾರ್ಯಕ್ರಮದಲ್ಲಿ ಡಾ. ದೇವರಾಜ ಟಿ.ಎನ್. ಮತ್ತು ಡಾ. ಜಯದೇವಪ್ಪ ಜಿ.ಕೆ ಭಾಗವಹಿಸಿದ್ದರು.

### ❖ ಮಣ್ಣು ಮತ್ತು ನೀರು ಪರೀಕ್ಷಾ ಕೇಂದ್ರ :

- ಕೃಷಿ ವಿಜ್ಞಾನ ಕೇಂದ್ರದಲ್ಲಿ ಸುಸಜ್ಜಿತವಾದ ಮಣ್ಣು ಮತ್ತು ನೀರು ಪರೀಕ್ಷಾ ಕೇಂದ್ರವಿದೆ. ಜಿಲ್ಲೆಯ ರೈತರು ಮಣ್ಣಿನ ಫಲವತ್ತತೆಯನ್ನು ಹಾಗೂ ನೀರಾವರಿಗೆ ಬಳಸುವ ನೀರಿನ ಗುಣಮಟ್ಟವನ್ನು ಕಂಡುಕೊಳ್ಳಲು ಮಣ್ಣು ಮತ್ತು ನೀರಿನ ಪರೀಕ್ಷೆ ಮಾಡಿಸುವುದು ಸೂಕ್ತ. ಪ್ರತಿ ಬೆಳೆಯನ್ನು ಬಿತ್ತುವ ಅಥವಾ ನಾಟಿ ಮಾಡುವ ಮುನ್ನ ಮಣ್ಣಿನ ಪರೀಕ್ಷೆ ಮಾಡಿಸಿ, ಪರೀಕ್ಷೆ ಆಧಾರಿತ ಸಾವಯವ ಗೊಬ್ಬರ ಹಾಗೂ ರಾಸಾಯನಿಕ ಗೊಬ್ಬರ ಹಾಕುವುದು ಸೂಕ್ತ. ಈ ತ್ರೈಮಾಸಿಕ ಅವಧಿಯಲ್ಲಿ ರೈತರೇ ತಂದ ಒಟ್ಟು 152 ಮಣ್ಣಿನ ಮಾದರಿಗಳನ್ನು ಹಾಗೂ 112 ನೀರಿನ ಮಾದರಿಗಳನ್ನು ಪರೀಕ್ಷಿಸಲಗಿದ್ದು, ಅದರ ಆಧಾರದ ಮೇಲೆ ಬೇಸಾಯ ಕ್ರಮಗಳನ್ನು ಅನುಸರಿಸಲು ಸೂಚಿಸಲಾಗಿದೆ. ಪ್ರತಿ ಮಣ್ಣಿನ ಮಾದರಿ ಪರೀಕ್ಷೆಗೆ ರೂ 100/- ಗಳನ್ನು ಹಾಗೂ ನೀರು ಪರೀಕ್ಷೆಗೆ ರೂ. 50/- ಗಳನ್ನು ಶುಲ್ಕವನ್ನು ನಿಗದಿಪಡಿಸಲಾಗಿದೆ. ಜಿಲ್ಲೆಯ ರೈತರು ಇದರ ಸುದುಪಯೋಗ ಪಡೆದುಕೊಳ್ಳಬೇಕಾಗಿ ಕೋರಲಾಗಿದೆ.

## ಸಮೂಹ ಚರ್ಚೆ ಮತ್ತು ಕ್ಷೇತ್ರ ಭೇಟಿಗಳು:



ದಿನಾಂಕ 10-06-2013 ರಂದು ಜಗಳೂರು ತಾ॥ ಹನುಮಂತಾಪುರ ಗ್ರಾಮದಲ್ಲಿ ಮುಂಚೂಣಿ ಪ್ರಾತ್ಯಕ್ಷಿಕೆಗೆ ರೈತರ ಆಯ್ಕೆಗಾಗಿ ಮೆಕ್ಕೆಜೋಳ ಮತ್ತು ತೊಗರಿ ಬೆಳೆಗಾರರೊಂದಿಗೆ ಸಮೂಹ ಚರ್ಚೆ ಹಮ್ಮಿಕೊಳ್ಳಲಾಗಿತ್ತು.



ಚನ್ನಗಿರಿ ತಾ॥ ಬಿಲ್ಲಹಳ್ಳಿ ಗ್ರಾಮದಲ್ಲಿ 'ರಾಗಿಯ ಸುಧಾರಿತ ಅಲ್ಪಾವಧಿ ತಳಿ ಜಿ.ಪಿ.ಯು.-48'ನ ಮುಂಚೂಣಿ ಪ್ರಾತ್ಯಕ್ಷಿಕೆಗೆ ಸಮೂಹ ಚರ್ಚೆಯಲ್ಲಿ ರೈತರ ಆಯ್ಕೆ ಮಾಡಲಾಯಿತು.



ದಾವಣಗೆರೆ ತಾ॥ ಗೋಪನಾಳ್ ಗ್ರಾಮದಲ್ಲಿ ಹಮ್ಮಿಕೊಂಡಿರುವ 'ಯಾಂತ್ರೀಕೃತ ಭತ್ತ ನಾಟಿ' ಪ್ರಾತ್ಯಕ್ಷಿಕೆಯ ಸಸಿ ಮಡಿ ವೀಕ್ಷಣೆ ಮಾಡುತ್ತಿರುವುದು.



ದಾವಣಗೆರೆ ತಾ॥ ಆಲೂರು ಗ್ರಾಮದಲ್ಲಿ ಹಮ್ಮಿಕೊಂಡಿರುವ 'ಶೇಂಗಾ ತಳಿಗಳಾದ ಜಿ.ಪಿ.ಬಿ.ಡಿ.-4, ಐ.ಸಿ.ಜಿ.ವಿ.-91114 ಮತ್ತು ಕೆ.ಸಿ.ಜಿ.-6 ನ ತಂತ್ರಜ್ಞಾನ ಮರು ಪರಿಶೀಲನಾ' ತಾಕುಗಳಿಗೆ ಕ್ಷೇತ್ರ ಭೇಟಿ.



ದಾವಣಗೆರೆ ತಾ॥ ಬೆಳವನೂರು ಗ್ರಾಮದಲ್ಲಿ ಸ್ಥಾಪಿಸಿರುವ 'ಅಂಗಾಂಶ ಕೃಷಿ ಬಾಳೆ' ಘಟಕದ ಮೂಲ ಸೌಕರ್ಯಗಳ ಪರಿಶೀಲನೆ



ದಾವಣಗೆರೆ ತಾ॥ ಹೊಸ ಚಿಕ್ಕನಹಳ್ಳಿ ಗ್ರಾಮದಲ್ಲಿ ಹಮ್ಮಿಕೊಂಡಿರುವ 'ಬಾಳೆಯಲ್ಲಿ ಸಮಗ್ರ ನಿರ್ವಹಣೆ' ತಾಕುಗಳಿಗೆ ಕ್ಷೇತ್ರ ಭೇಟಿ.



ದಾವಣಗೆರೆ ತಾ॥ ಮತ್ತಿ ಗ್ರಾಮದಲ್ಲಿ ಹಿಡಿಮುಂಡಿಗೆ ಬಾಧಿತ ಅಡಿಕೆ ತೋಟಕ್ಕೆ ವೈಜ್ಞಾನಿಕ ಕ್ಷೇತ್ರ ಭೇಟಿ



❖ **ಆಚರಿಸಿದ ವಿಶೇಷ ದಿನಾಚರಣೆ:**

ದಿನಾಂಕ 05-06-2013 ರಂದು ದಾವಣಗೆರೆ ನಗರದ ಮಾಗನೂರು ಬಸಪ್ಪ ಪ್ರೌಢಶಾಲೆಯಲ್ಲಿ ಜೈವಿಕ ಇಂಧನ ಸಸಿನೆಡುವ ಮೂಲಕ 'ವಿಶ್ವ ಪರಿಸರ' ದಿನಾಚರಣೆ ಆಚರಿಸಲಾಯಿತು.

## ಕೃಷಿ ಮುನ್ಸೂಚನೆಗಳು :

❖ **ಭತ್ತ:**

ಯಾಂತ್ರೀಕೃತ ನಾಟಿ ಪದ್ಧತಿ ಸಸಿ ಮಡಿ ತಯಾರಿಕೆ

- ಎಕರೆಗೆ 60-80 ಟ್ರೇ.
- ಎಕರೆಗೆ 10 ಕೆಜಿ ಬೀಜ.
- ಮೊದಲು ಮಣ್ಣು ಮತ್ತು ಎರೆಗೊಬ್ಬರವನ್ನು ಚೆನ್ನಾಗಿ ಮಿಶ್ರಣ ಮಾಡಿ ಟ್ರೇಗಳಲ್ಲಿ ತುಂಬಬೇಕು.
- ತುಂಬಿದ ನಂತರ ಪ್ರತಿ ಟ್ರೇಗೆ 120 ಗ್ರಾಂ. ಬೀಜವನ್ನು ಬಿತ್ತನೆ ಮಾಡಬೇಕು.

❖ **ಮೆಕ್ಕೆಜೋಳ:**

- ಮೆಕ್ಕೆಜೋಳದಲ್ಲಿ ಅಂತರ ಬೆಳೆಯಾಗಿ ದ್ವಿದಳ ಧಾನ್ಯಗಳನ್ನು ಬೆಳೆಯಬೇಕು (6:1).
- ಜಿಂಕ್- 5 ಕೆಜಿ, ಜಿಪ್ಸಂ- 200 ಕೆಜಿ ಹಾಗೂ ಬೋರಾನ್ 1 ಕೆಜಿ. ಪ್ರತಿ ಎಕರೆಗೆ ಬಳಸುವುದರಿಂದ ಇಳುವರಿಯನ್ನು ಹೆಚ್ಚಿಸಬಹುದು.
- **ಕಾಂಡಕೊರಕ** : ಸುಳಿ ಎಲೆಗಳಲ್ಲಿ ಸಣ್ಣ ರಂಧ್ರಗಳು ಕಂಡು ಬರುತ್ತವೆ. ಸುಳಿ ಒಣಗಿ ಎಳೆದಾಗ ಕಿತ್ತು ಬರುತ್ತದೆ. ಸುಳಿಯಲ್ಲಿ ಮರಿಹುಳುಗಳು ಹಳದಿಯಾಗಿದ್ದು, ತಲೆ ಕಂದು ಬಣ್ಣ ಮತ್ತು ದೇಹದ ಮೇಲೆ ಉದ್ದನೆಯ ಸಾಲುಗಳಲ್ಲಿ ಕಪ್ಪು ಚುಕ್ಕೆಗಳಿರುತ್ತದೆ.

**ಹತೋಟಿ** : ಬಾಧೆಗೆ ತುತ್ತಾದ ಗಿಡಗಳನ್ನು ಕಿತ್ತು ಸುಡಬೇಕು. ದ್ವಿದಳ ಧಾನ್ಯಗಳನ್ನು ಮಿಶ್ರ ಬೆಳೆಯಾಗಿ ಬೆಳೆಯಬೇಕು. ಬಿತ್ತನೆ ಮಾಡುವಾಗ ಸಾಲಿನಲ್ಲಿ ಎಕರೆಗೆ 5 ಕೆಜಿ ಅಥವಾ ಬಿತ್ತಿದ 30 ದಿನದ ನಂತರ ಎಕರೆಗೆ 8 ಕೆಜಿ. ಕಾರ್ಬೋಫ್ಯೂರಾನ್ ಹರಳುಗಳನ್ನು ಸುಳಿಯಲ್ಲಿ ಹಾಕಬೇಕು ಅಥವಾ ಕ್ಲೋರ್‌ಪೈರಿಫಾಸ್ 2 ಮಿಲೀ ಪ್ರತಿ ಲೀಟರ್ ನೀರಿನಲ್ಲಿ ಬೆರಸಿ ಸಿಂಪಡಿಸಬೇಕು.

❖ **ಶೇಂಗಾ :**

- ಎಕರೆಗೆ 200 ಕೆಜಿ ಜಿಪ್ಸಂನ್ನು ಬಳಸಬೇಕು.

❖ **ಹತ್ತಿ :**

- **ರಸ ಹೀರುವ ಕೀಟಗಳು :** ಹೇನು, ಥ್ರಿಪ್ಸ್, ಹಸಿರುಜಿಗಿ, ಬಿಳಿನೊಣ, ಮಿರಿಡ್ ತಿಗಣೆ, ಹಿಟ್ಟು ತಿಗಣೆ ಮತ್ತು ನುಶಿ.
- **ಲಕ್ಷಣ :** ಬೆಳೆಯುತ್ತಿರುವ ಕುಡಿ, ಎಲೆಗಳ ಕೆಳಭಾಗ ಮತ್ತು ಮೊಗ್ಗುಗಳಿಂದ ರಸ ಹೀರುತ್ತವೆ. ಎಲೆಗಳು ಚಿಬ್ಬುಗಟ್ಟಿ ಮುದುಡಿಕೊಳ್ಳುತ್ತವೆ. ಬೆಳವಣಿಗೆ ಕುಂಠಿತವಾಗಿ ಇಳುವರಿ ಕಡಿಮೆಯಾಗುತ್ತದೆ. ಎಲೆಗಳ ಮೇಲೆ ಕಪ್ಪು ಬೂಸ್ಟ್ ಬೆಳವಣಿಗೆ ಕಂಡು ಬರುತ್ತದೆ. ಕಾಯಿಗಳು ಇರುಕಲಾಗಿ ಹತ್ತಿಯ ಗುಣಮಟ್ಟ ಕಡಿಮೆಯಾಗುತ್ತದೆ.

**ಹತೋಟಿ : ಥ್ರಿಪ್ಸ್ ಮತ್ತು ಹಸಿರು ಜಿಗಿ:** ಅಸಿಟಾಮಿಪ್ರಿಡ್ 0.2 ಗ್ರಾಂ / ಲೀ, ಸಸ್ಯ ಹೇನು: ಬೇವು ಆಧಾರಿತ ಕೀಟನಾಶಕ 3 ಮಿಲೀ / ಲಿ, ಹಿಟ್ಟು ತಿಗಣೆ ಮತ್ತು ಮಿರಿಡ್ ತಿಗಣೆ: ಪ್ರೊಫೊನೊಫಾಸ್ 2 ಮಿಲೀ / ಲೀ, ಬಿಳಿ ನೊಣ: ಟ್ರೈಜೋಫಾಸ್ 1.5 ಮಿಲೀ. / ಲೀ ಮತ್ತು ಮೈಟ್ ನುಶಿ: ಪ್ರೊಪರ್ ಗೈಟ್ 2 ಮಿಲೀ /ಲೀ.

❖ **ಅಡಿಕೆ :**

- ಅಡಿಕೆ ಬೆಳೆಯಲ್ಲಿ ರಸಗೊಬ್ಬರ ನೀಡಲು ಸೂಕ್ತ ಕಾಲವಿದ್ದು, 10 ವರ್ಷ ಮೇಲ್ಪಟ್ಟ ಮರಗಳಾದರೆ ಪ್ರತಿ ಗಿಡಕ್ಕೆ 100 ಗ್ರಾಂ 15:15:15 ಮತ್ತು 350 ಗ್ರಾಂ ಡಿಎನ್‌ಪಿ ಗೊಬ್ಬರವನ್ನು ನೀಡಬೇಕು. ಬಳಿಕ ತೋಟದ ಫಲವತ್ತತೆ ಹೆಚ್ಚಿಸಲು ಹಸಿರೆಲೆ ಗೊಬ್ಬರದ ಬೆಳೆಗಳಾದ ಸೆಣಬು, ಡಯಾಂಚ ಅಥವಾ ವೆಲ್‌ವೆಟ್ ಬೀನ್ಸ್‌ಗಳನ್ನು ಬೆಳಸಬಹುದು.

❖ **ಬಾಳೆ :**

- ಬಾಳೆಯಲ್ಲಿ ಇಳುವರಿ ಹೆಚ್ಚಿಸಲು ತರಳಬಾಳು ಕೃಷಿ ವಿಜ್ಞಾನ ಕೇಂದ್ರದಲ್ಲಿ ಉತ್ಪಾದಿಸುವ 'ತರಳಬಾಳು ಬನಾನ ಸ್ಪೆಷಲ್' ನ್ನು 5.0 ಗ್ರಾಂ ಪ್ರತಿ ಲೀಟರ್ ನೀರಿನಲ್ಲಿ ಬೆರಸಿ 5 ನೇ ತಿಂಗಳಿಂದ ಪ್ರಾರಂಭಿಸಿ ತಿಂಗಳಿಗೊಮ್ಮೆ 6 ಬಾರಿ ಸಿಂಪಡಿಸಬೇಕು.

**ಬಾಳೆಯಲ್ಲಿ ಸೊರಗು ರೋಗ:** ಮಣ್ಣಿನಲ್ಲಿರುವ ಶಿಲೀಂದ್ರ ರೋಗಾಣು ಫ್ಯುಸೇರಿಯಂ ಅಕ್ಸಿಸ್ಪೊರಂ ಕ್ಯುಬೆನ್ಸ್ ದಿಂದ ರೋಗ ಬರುತ್ತದೆ. ಗೆಡ್ಡೆ ನೆಟ್ಟು ನಾಲ್ಕು- ಐದು ತಿಂಗಳಲ್ಲಿ ರೋಗ ಕಂಡುಬರುತ್ತದೆ. ಬೆಳೆಯುತ್ತಿರುವ ಬೇರುಗಳ ಮೂಲಕ ಶಿಲೀಂದ್ರ ರೋಗಾಣು ಗಿಡದಲ್ಲಿ ಸೇರಿಕೊಂಡು ನೀರು ಸಾಗಾಣಿಕೆ ಕೊಳವೆಗಳಲ್ಲಿ ಬೆಳೆದು ನಂತರ ತಳಭಾಗದ ಎಲೆಗಳು ಹಳದಿಯಾಗುತ್ತವೆ. ಎಲೆಗಳ ತೊಟ್ಟಿನ ಭಾಗ ಮುರಿದು ಸೊರಗಿ ಜೋತು ಬೀಳುತ್ತವೆ. ರೋಗ ಹೆಚ್ಚಾದಾಗ ಕಾಂಡದ ಬುಡದಲ್ಲಿ ಬಿರುಕುಗಳು ಕಂಡು ಬರುತ್ತವೆ. ಗಡ್ಡೆಗಳನ್ನು ಕತ್ತರಿಸಿ ನೋಡಿದಾಗ ಕೊಳೆತ ಮೀನಿನ ವಾಸನೆ ಬರುತ್ತದೆ. ರೋಗವು ಉಸುಕು ಮಿಶ್ರಿತ ಭೂಮಿ ಮತ್ತು ಕಡಿಮೆ ರಸಸಾರವಿರುವ ಭೂಮಿಯಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

**ಹತೋಟಿ :** • ನಿರೋಧಕ ತಳಿಗಳಾದ ಕ್ಯಾವೆಂಡಿಶ್ ಅಥವಾ ರೋಬಸ್ಟಾ ಬೆಳೆಯಬೇಕು. • ರೋಗ ರಹಿತ ಕಂದುಗಳನ್ನು ಆಯ್ಕೆ ಮಾಡಬೇಕು.

• ಕಂದು ನಾಟಿ ಮಾಡುವ ಸಮಯದಲ್ಲಿ ಪ್ರತಿ ಗುಂಡಿಗೆ 250 ಗ್ರಾಂ ಬೇವಿನ ಹಿಂಡಿ, 10 ಗ್ರಾಂ ಕಾರ್ಬೋಫ್ಯೂರಾನ್ ಮತ್ತು 50 ಗ್ರಾಂ ಟ್ರೈಕೊಡರ್ಮಾ ಜೈವಿಕ ಶಿಲೀಂಧ್ರನಾಶಕ ಹಾಕಬೇಕು. • ಕಂದುಗಳ ಹಳೆಯ ಬೇರುಗಳನ್ನು ಸವರಿ ನಾಟಿಗೆ ಮೊದಲು ಕಾರ್ಬನ್ ಡೈಜಿಯಂ 1 ಗ್ರಾ. ಮತ್ತು ಕ್ಲೋರ್‌ಪೈರಿಫಾಸ್ 2 ಮಿಲಿ ಪ್ರತಿ ಲೀ. ದ್ರಾವಣದಲ್ಲಿ 30 ನಿಮಿಷ ಅದ್ದಿ ನಾಟಿ ಮಾಡಬೇಕು. • ಎರಡು ತಿಂಗಳಿಗೊಮ್ಮೆ 3 ಸಲ, ನಾಟಿ ಮಾಡಿದ ನಾಲ್ಕು ತಿಂಗಳಿಂದ 0.2 ರ ಕಾರ್ಬನ್ ಡೈಜಿಮ್ ( 2 ಗ್ರಾಂ / ಲೀ ನೀರು) ದ್ರಾವಣವನ್ನು ಪ್ರತಿ ಗಿಡಕ್ಕೆ 3–5 ಲೀ ದ್ರಾವಣ ಸುರಿಯಬೇಕು. • ರೋಗ ಬಾಧಿತ ಗಿಡಗಳನ್ನು ಕಿತ್ತು ಸುಟ್ಟುಹಾಕಿ ನಂತರ 1–2 ಕೆಜಿ ಸುಣ್ಣ ಹಾಕಬೇಕು. • ನೀರು ನಿಲ್ಲುವ ಜಾಗದಲ್ಲಿ ಬಸಿಗಾಲುವೆ ವ್ಯವಸ್ಥೆ ಮಾಡಬೇಕು.

❖ **ಹೈನುಗಾರಿಕೆ :**

- ತರಳಬಾಳು ಕೃಷಿ ವಿಜ್ಞಾನ ಕೇಂದ್ರದಲ್ಲಿ ಉತ್ಕೃಷ್ಟ ಹೈನುರಾಸುಗಳ ತಳಿಗಳ ವೀರ್ಯವು ಕೃತಕಗರ್ಭಧಾರಣೆಗೆ ಲಭ್ಯವಿದ್ದು, ರೈತರು ತಮ್ಮ ರಾಸುಗಳಿಗೆ ಇದರ ಲಾಭವನ್ನು ಪಡೆದುಕೊಳ್ಳಬಹುದು.

❖ **ಮೀನು ಕೃಷಿ :**

ಮೀನು ಮರಿಗಳನ್ನು ಕೊಳ / ಕೆರೆಗಳಿಗೆ ಬಿಡಲು ಸಕಾಲ. ಚದರ ಮೀಟರ್‌ಗೆ 2–3 ರಂತೆ ಬೆರಳುದ್ದ ಗಾತ್ರದ ಮೀನು ಮರಿಗಳನ್ನು ಬಿಡಬೇಕು. ಸಗಣಿ ಗೊಬ್ಬರದಿಂದ ಫಲವತ್ತೀಕರಿಸಿದ ಕೊಳಗಳು ಪ್ಲಾಂಕ್ಟನ್‌ಗಳಿಂದ ತುಂಬಿರಬೇಕು. ಕಾಟ್ಲಾ, ರೋಹು, ಮೃಗಾಲ್, ಸಾಮಾನ್ಯಗೆಂಡೆ, ಹುಲ್ಲುಗೆಂಡೆ, ಬೆಳ್ಳಿಗೆಂಡೆ ಈ ಆರು ತಳಿಗಳ ಮರಿಗಳು ಇಲಾಖೆಯಲ್ಲಿ ದೊರೆಯುತ್ತವೆ. 2–3 ತಳಿಗಳನ್ನು ಒಟ್ಟಿಗೆ ಬಿಡಬಹುದು. ಮುಂದಿನ ಹಂತಗಳ ನಿರ್ವಹಣೆಯ ವೈಜ್ಞಾನಿಕ ಮಾಹಿತಿಗೆ ಕೃಷಿ ವಿಜ್ಞಾನ ಕೇಂದ್ರ / ಇಲಾಖೆಯನ್ನು ಸಂಪರ್ಕಿಸಬಹುದು.

ತೆರೆದ–ಅಂಚೆ

**ಗೆ,**

____________________

____________________

____________________

ಪ್ರಧಾನ ಸಂಪಾದಕರು: ಡಾ. ದೇವರಾಜ ಟಿ.ಎನ್.

ಸಹ ಸಂಪಾದಕರು: ಶ್ರೀ ರಘುರಾಜ ಜೆ., ಶ್ರೀ ಬಸವನಗೌಡ ಎಂ.ಜಿ., ಶ್ರೀ ಮಲ್ಲಿಕಾರ್ಜುನ ಬಿ.ಓ., ಡಾ. ಜಯದೇವಪ್ಪ ಜಿ.ಕೆ., ಶ್ರೀ ಪ್ರಸನ್ನಕುಮಾರ ಎನ್., ಶ್ರೀ ರೇವಣಸಿದ್ದಪ್ಪ ಜೆ.ಬಿ.ಪಿ., ಶ್ರೀ ವಿಜಯಕುಮಾರ್ ಎಸ್. ಬಿ.

ಪ್ರಕಾಶಕರು : ಕಾರ್ಯಕ್ರಮ ಸಂಯೋಜಕರು, ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ಕದಳೀವನ, ಎಲ್.ಐ.ಸಿ. ಕಾಲೋನಿ ಲೇಔಟ್, ಬಿಐಇಟಿ ರಸ್ತೆ, ದಾವಣಗೆರೆ–577004, ಕರ್ನಾಟಕ

ಮುದ್ರಕರು: ಅಶಿ ಪ್ರಿಂಟರ್ಸ್, ದಾವಣಗೆರೆ, ಫೋ: 253341.